**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ,**
**ವಿರಾಜಪೇಟೆ**
***ಸಿ.ಸಿ.ನಂ : 552/2016***

ಪಿಡಬ್ಲ್ಯು - 2
ಸಿಡಬ್ಲ್ಯು - 2

| | | |
|---|---|---|
| ಸಾಕ್ಷಿದಾರರ ಹೆಸರು | : | ಗಣಪತಿ |
| ತಂದೆಯ ಹೆಸರು | : | ಬಿ ಎ ಪೂವಯ್ಯ |
| ವಯಸ್ಸು | : | 68 ವರ್ಷ |
| ವೃತ್ತಿ | : | ಕೃಷಿಕ |
| ವಾಸಸ್ಥಳ | : | ಪಾಲಿಬೆಟ್ಟ |

***ದಿನಾಂಕ : 16-03-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಶ್ರೀ. ಎಪಿಪಿಯವರಿಂದಃ-*** **ಭಾ. ದಂ. ಸಂ. *299* ರಡಿಯಲ್ಲಿ ಮುಖ್ಯ ವಿಚಾರಣೆ**

2003 ನೇ ಇಸವಿ ಅಕ್ಟೋಬರ್ ಮಾಹೆಯಲ್ಲಿ ನನ್ನ ಅಣ್ಣನ ಮನೆಯಲ್ಲಿ ಎರಡು ಗನ್ ಕಳ್ಳತನ ಆಗಿರುತ್ತದೆ. ಚಾಸಾ-1 ರವರ ರೈಟರ್ ಗೆ ದೂರವಾಣಿ ಕರೆ ಮಾಡಿ, ನಮ್ಮ ಮಾಲೀಕರ ಮನೆಯಿಲ್ಲಿ ಕಳ್ಳರು ನುಗ್ಗಿ ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾವೆಲ್ಲರೂ ಚಾಸಾ-1 ರವರ ಮನೆಗೆ ಹೋಗಿ ನೋಡಲಾಗಿ ಅವರ ಮನೆಯಿಂದ ಎರಡು ಗನ್ ಕಳ್ಳತನ ಆಗಿತ್ತು. ಈ ಕುರಿತಾಗಿ ಚಾಸಾ-1 ರವರು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

***<u>ಪಾಟೀ ಸವಾಲು</u>* ಶ್ರೀ. ಸರ್ಕಾರಿ ವಕೀಲರಿಂದಃ-**

ದಿನಾಂಕ 17-10-2003 ರಂದು ಚಾಸಾ-1 ರವರು ಕುಟುಂಬ ಸಮೇತರಾಗಿ ಮನೆಗೆ ಬೀಗ ಹಾಕಿ ಮೈಸೂರಿಗೆ ತನ್ನ ನೆಂಟರ ಮನೆಯ ಮದುವೆಗೆ ಹೋಗಿರುತ್ತಾರೆ. ನಾನು ಕೂಡ ಆ ಸಂದರ್ಭದಲ್ಲಿ ಮದುವೆಗಾಗಿ ಮೈಸೂರಿಗಾಗಿ ಹೋಗಿರುತ್ತೇನೆ. ಚಾಸಾ-1 ರವರು ಮೈಸೂರಿನಿಂದ ಕೆಲಸ ನಿಮಿತ್ತ ಬೆಂಗಳೂರಿಗೆ ಹೋಗಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ-1 ರವರು ಮನೆಯ ಕಡೆ ನೋಡಿಕೊಳ್ಳುವಂತೆ ನನಗೆ ತಿಳಿಸಿರುತ್ತಾರೆ.

ದಿನಾಂಕ 19-10-2003 ರಂದು ರಾತ್ರಿ 11 ಗಂಟೆಗೆ ಚಾಸಾ-1 ರವರ ಮನೆಯ ಬಳಿ ಹೋಗಿರುತ್ತೀರಿ ಎಂದರೆ ಸರಿ. ಆ ಸಂದರ್ಭದಲ್ಲಿ ಮನೆಯ ಬಳಿ ಶಬ್ದ ಕೇಳಿರುತ್ತದೆ. ಆಗ ನಾನು ಒಬ್ಬನೇ ಇದ್ದ ಕಾರಣ ಅಲ್ಲಿ ಏನಾಗುತ್ತಿದೆ ಎಂದು ಹುಡುಕಾಡಲು ಸಾಧ್ಯವಾಗಲಿಲ್ಲ. ನಂತರ ನಾನು ನಮ್ಮ ಮನೆಗೆ ಹೋಗಿರುತ್ತೇನೆ. ನಂತರ ನಾನು ಬೆಳಿಗ್ಗೆ ಚಾಸಾ-1 ರವರ ಮನೆಯ ಬಳಿ ಹೋಗಿ ನೋಡಿದಾಗ ಅವರ ಮನೆಯ ಬಾಗಿಲು ಮುರಿದು ಹೋಗಿತ್ತು. ನಂತರ ಸದರಿ ವಿಚಾರವನ್ನು ನಾನು ಪೋಲಿಸರಿಗೆ ಮತ್ತು ಚಾಸಾ-1 ರವರಿಗೆ ತಿಳಿಸಿರುತ್ತೇನೆ. ಪೋಲಿಸರು ಬಂದ ನಂತರ ನಾನು ಚಾಸಾ-1 ರವರ ಮನೆಯ ಬಳಿ ಹೋಗಿರುತ್ತೇನೆ. ಆಗ ಅವರ ಮನೆಯಿಂದ ಒಂದು ಒಂಟಿ ನಲಿಕೆಯ ರೈಫಲ್ ಮತ್ತು ಜೋಡಿ ನಲಿಕೆಯ ತೋಟದ ಕೋವಿ ಕಳ್ಳತನವಾಗಿರುತ್ತದೆ.

ಈ ಕುರಿತು ಚಾಸಾ-1 ರವರು ಪೋಲಿಸರಿಗೆ ಪುಕಾರು ನೀಡಿರುತ್ತಾರೆ ಎಂದರೆ ಸರಿ. ನಂತರ ದಿನಾಂಕ 30-09-2010 ರಂದು ಆರೋಪಿತರನ್ನು ನಿಮ್ಮ ಮನೆಯ ಬಳಿ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಸದರಿ ಆರೋಪಿತರು ತಾವು ಚಾಸಾ-1 ರವರ ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಸದರಿ ಕೋವಿಗಳ ಪೈಕಿ ಒಂದು ಕೋವಿಯನ್ನು ಕೇರಳದಲ್ಲಿ ಯಾರೋ ಅಪರಚಿತರಿಗೆ ಕೊಟ್ಟಿರುತ್ತೇವೆ ಎಂದು ಪೋಲಿಸರು ನಿಮಗೆ ತಿಳಿಸಿರುತ್ತಾರೆ ಎಂದರೆ ಸರಿ. ನಂತರ ಇನ್ನೊಂದು ಕೋವಿಯನ್ನು ಕೊಂಗನ ಗ್ರಾಮದ ನವೀನ್ ಎಂಬುವರಿಗೆ ಕೊಟ್ಟಿರುತ್ತೇವೆಂದು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿ.

ಸದರಿ ಕೋವಿಗಳು ರೂ. 20000/- ಬೆಲೆ ಬಾಳುತ್ತವೆ ಎಂದರೆ ಸರಿ. ಈ ಕುರಿತು ನೀವು ಪೋಲಿಸರಿಗೆ ಒಂದು ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿ. ಆರೋಪಿತರನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲವೆಂದು ನುಡಿದಿರುತ್ತಾರೆ.

ಮರು ವಿಚಾರಣೆ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

**(ಕೋನಪ್ಪ ಎನ್.ವಿ)**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ವಿರಾಜಪೇಟೆ